ಓಎಸ್ ನಂ.14-23

ಪಿ.ಡಬ್ಲ್ಯೂ-1

ದಿನಾಂಕಃ 03-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿ</u>ವಾದಿ ಪರ ಶ್ರೀ ಎಮ್ ಪಿ.ಬಿ ವಕೀಲರಿಂದಃ**

1. ನಾನು ಕಳೆದ ಮೂರುವರೆ ವರ್ಷಗಳಿಂದ ಕೆಡಿಸಿಸಿ ಬ್ಯಾಂಕ್ ಹಿರೆಗುತ್ತಿ ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ನಿಮ್ಮ ಸಂಸ್ಥೆ ಯಲ್ಲಿ ಈಗಾಗಲೇ ಕಾಣಿಸಲಾದ ದಾಖಲಾತಿಗಳಲ್ಲಿ ಇರುವ ದಾವಾ ಜಮಿನುಗಳನ್ನು ಒತ್ತೆ ಇಟ್ಟು ಕೊಂಡು 1 ನೇ ಪ್ರತಿವಾದಿ ಸಾಲ ವನ್ನು ಪಡೆದು ಕೊಂಡಿದ್ದನು ಎಂದರೆ ಸರಿ. ಆತನು ದಿಃ19-3-2015 ರಂದು ನಮ್ಮ ಸಂಸ್ಥೆಯಿಂದ ಸಾಲ ಪಡೆದುಕೊಂಡಿದ್ದನು . ಸಾಲ ಕೊಡುವಾಗ ಯಾವ ಕಾನೂನಿನ ಪ್ರಕಾರ ಸಾಲ ಕೊಡುತ್ತೀರಿ ಎಂದರೆ ಅಸಿಸ್ಟಂಟ್ ರಜಿಸ್ಟ್ರಾರ ರವರು ನೀಡಿರುವ ನಿರ್ದೇಶನ ಮತ್ತು ಪ್ರಧಾನ ಕಚೇರಿಯವರು ನೀಡಿರುವ ಆದೇಶದ ಮೇರೆಗೆ ಸಾಲ ಕೊಡಲಾಗಿರುತ್ತದೆ. ನಿಮ್ಮ ಕೆಡಿಸಿಸಿ ಬ್ಯಾಂಕ ಹುಟ್ಟಿರುವುದೇ ಕರ್ನಾಟಕ ಸಹಕಾರಿ ಸಂಘದ ಕಾಯ್ದೆಯಡಿಯಲ್ಲಿ ಎಂದರೆ ಸರಿ . ನಿಮ್ಮ ಸಂಸ್ಥೆಯ ಎಲ್ಲಾ ರೂಲ್ಸ ಮತ್ತು ರೆಗ್ಯೂಲೇಷನ್ ವನ್ನು ಕರ್ನಾಟಕ ಸಹಕಾರಿ ಸಂಘದ ಕಾಯ್ದೆ ಯ ನಿಯಮಾವಳಿಯಲ್ಲಿ ಬರುತ್ತದೆ ಎಂರದೆ ಸರಿ . ನಾನು ಸಹಕಾರಿ ಸಂಘದ ಆ್ಯಕ್ಟ ಮತ್ತು ರೂಲ್ಸ ಓದಿರುತ್ತೇನೆ . 1 ನೇ ಪ್ರತಿವಾದಿ ನಿಮ್ಮ ಸಂಸ್ಥೆಯಿಂದ ಸಾಲ ಪಡೆಯುವಾಗ ಕರ್ನಾಟಕ ಸಹಕಾರಿ ಸಂಘದ ಕಾಯ್ದೆ ಯ ನಿಯಮಾವಳಿಯಲ್ಲಿ ಸಾಲದ ಅರ್ಜಿ ಸಲ್ಲಿಸಿರುತ್ತಾನೆ. ಸಾಲವನ್ನು ಕೊಡುವಾಗ ಕರ್ನಾಟಕ ಸಹಕಾರಿ ಸಂಘದ ಕಾಯ್ದೆ ಯ ನಿಯಮಾಳಿಯಲ್ಲಿರುವ format ದಲ್ಲಿ ಸಾಲದ ಅರ್ಜಿ ಪಡೆದುಕೊಳ್ಳುತ್ತೀರಿ ಎಂದರೆ ಸರಿ . ಕರ್ನಾಟಕ ಸಹಕಾರಿ ಸಂಘದ ನಿಯಮದ ಅಡಿಯಲ್ಲಿ ಸಾಲವನ್ನು ಸಾಲಗಾರನು ಮರು ಪಾವತಿ ಮಾಡದೇ ಇದ್ದಲ್ಲಿ ಅದನ್ನು ಅಸಿಸ್ಟಂಟ್ ರಜಿಸ್ಟ್ರಾರ ರವರ ನ್ಯಾಯಾಲಯಕ್ಕೆ ರೇಫರ ಮಾಡುತ್ತೀರಿ ಎಂದರೆ ಸರಿ . ದಾವಾ ಆಸ್ತಿಯನ್ನು ಮೊಟಗೇಜ್ ಮಾಡಿದ ನಂತರ ಸಾಲದ ನಿಗದಿತ ಅವಧಿಯಲ್ಲಿ ಸದ್ರಿ 1 ನೇ ಪ್ರತಿವಾದಿ ಹಣವನ್ನು ಮರು ಪಾವತಿ ಮಾಡಿರುತ್ತಾನೆ ಇಲ್ಲವೊ ಎಂದರೆ ಆತನು ಸಾಲವನ್ನು ಪಡೆದು ಕೊಂಡ ನಂತರ ಸಾಲ

ತುಂಬಿಲ್ಲ . ಆದರೆ ಕೆಲವೊಮ್ಮೆ ಸಾಲ ತುಂಬಿರುತ್ತಾನೆ . ಆತನು ಭಾಗಶಃ ಸಾಲ ಮರು ಪಾವತಿ ಮಾಡಿರುತ್ತಾನೆ . ಇಂದಿನವರೆಗೆ ಸದ್ರಿ 1 ನೇ ಪ್ರತಿವಾದಿ ಯು ಎಷ್ಟು ಹಣವನ್ನು ಮರು ಪಾವತಿ ಮಾಡಿರುತ್ತಾನೆ ಎಂದರೆ ಆತನು ರೂ 90 ಲಕ್ಷ ಹಣವನ್ನು ಮರು ಪಾವತಿ ಮಾಡಿರುತ್ತಾನೆ . ಆತನು ಸಾಲವನ್ನು ಪಡೆದುಕೊಂಡ ದಿನದಿಂದ ಇಲ್ಲಿಯವರೆಗೆ ಲೋನ ರಿಕವರಿ ಪ್ರೊಸಿಡಿಂಗ್ ಜಾರಿಯಲ್ಲಿ ಇರುತ್ತದೆ ಎಂದರೆ ಹೌದು . ಸರಕಾರಿ ಜಮೀನನನ್ನು ನಿಮ್ಮ ಬ್ಯಾಂಕಿಗೆ ಒತ್ತೆ ಇಟ್ಟ ನಂತರ ಅದನ್ನು ನಿಮ್ಮ ಒಪ್ಪಿಗೆ ಇಲ್ಲದೆ ಮಾರಾಟ ಮಾಡಲು ಬರುವುದಿಲ್ಲ ಎಂದರೆ ಸರಿ . ದಾವಾಸ್ತಿಗಳನ್ನು ಮಾರಾಟ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯು ನಿಮ್ಮ ಒಪ್ಪಿಗೆಯನ್ನು ಪಡೆದುಕೊಂಡಿರುತ್ತಾನಾ ಎಂದರೆ ಇಲ್ಲ . ಸಹಕಾರಿ ಸಂಘದ ಒಪ್ಪಿಗೆ ಇಲ್ಲದೆ ಸಾಲಕ್ಕೆ ಒತ್ತೆ ಇಟ್ಟ ಜಮೀನನ್ನು ನಿಮ್ಮ ಒಪ್ಪಿಗೆ ಇಲ್ಲದೆ ಮಾರಾಟ ಮಾಡಿದ್ದಲ್ಲಿ ಅದು ಅಂತಹ ಕ್ರಯ ಪತ್ರ ಶೂನ್ಯ ಎಂದು ಪರಿಗಣಿಸತಕ್ಕದ್ದು ಎಂದರೆ ಸರಿ . ಸದ್ರಿ ಕ್ರಯ ಪತ್ರ ಶೂನ್ಯ ದಾಖಲಾತಿ ಎಂದು ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ದಾವೆ ಮಾಡಿರುತ್ತೀರಿ ಎಂದರೆ ಸರಿಯಲ್ಲ . ಸಹಕಾರಿ ಕಾಯ್ದೆ ಯಡಿಯಲ್ಲಿ ಶೂನ್ಯ ದಾಖಲಾತಿ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಲು ಅವಕಾಶ ಇಲ್ಲದೆ ಇದ್ದರೂ ಸಹ ಅನಗತ್ಯವಾಗಿ 1 ನೇ ಪ್ರತಿವಾದಿ ಮೇಲೆ ಸುಳ್ಳು ದಾವೆ ಮಾಡಿರುತ್ತೀರಿ ಎಂದರೆ ಸರಿಯಲ್ಲ .ಈ ರೀತಿಯಾಗಿ ದಾವೆ ಮಾಡಿ ಸದ್ರಿ ಸಾಲದ ಹಣ, ಕೊರ್ಟ ಖರ್ಚು, ವಕೀಲರ ಖರ್ಚು ಎಲ್ಲಾ ಆತನ ಮೇಲೆ ಹಾಕಬೇಕು ಎಂದು ಈ ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ .

2. ರೂ 2 ಕೋಟಿ 75 ಲಕ್ಷ ಸಾಲದ ಹಣದಲ್ಲಿ ಈ ಜಮೀನನನ್ನು ಮಾರಾಟ ಮಾಡಿದ ನಂತರ ಎಷ್ಟು ಹಣವನ್ನು 1 ನೇ ಪ್ರತಿವಾದಿ ತುಂಬಿರುತ್ತಾನೆ ಎಂದರೆ ಜಮೀನು ಮಾರಾಟ ವಾದ ನಂತರ ಹಣ ತುಂಬಿಲ್ಲ ಆದರೆ ಬ್ಯಾಂಕಿನಿಂದ ಓಕ್ಷನ್ ವಾದ ಮೇಲೆ ಹಣ ಮರು ಪಾವತಿ ಮಾಡಿರುತ್ತಾನೆ . 3 ಜಮಿನುಗಳನ್ನು ಮಾರಾಟ ಮಾಡಿ ಬಂದ ಹಣದಿಂದ 1 ಪ್ರತಿವಾದಿ ಸಾಲದ ಹಣವನ್ನು ನಿಮ್ಮ ಬ್ಯಾಂಕಿಗೆ ಮರು ಪಾವತಿ ಮಾಡಿರುತ್ತಾನೆ ಎಂದರೆ ಸರಿಯಲ್ಲ . ಈವರೆಗೂ ದಾವಾ 3 ಆಸ್ತಿಗಳನ್ನು ಮಾರಾಟಕ್ಕೆ ಇದು ವರೆಗೆ ತೆಗೆದಿರುತ್ತಿರೋ ಇಲ್ಲವೊ ಎಂದರೆ ಈ 3 ಅಸ್ತಿಗಳ ಮೇಲೆ ಮತ್ತು NA ಅಸ್ತಿಯ ಮೇಲೆ ಮಾರಾಟಕ್ಕೆ ತೆಗೆದಿರುತ್ತೇವೆ . ಮಾರಾಟಕ್ಕೆ ತೆಗೆದಿದ್ದು ಕರ್ನಾಟಕ ಕೊ–ಅಪರೇಟಿವ ಸೊಸೈಯ ಕಾಯ್ದೆ ಯಡಿಯಲ್ಲಿ

ತೆಗೆದಿರುತ್ತಿರೊ ಅಥವಾ ನಿಮ್ಮ ಸ್ವಂತ ಕಾಯ್ದೆಯಡಿಯಲ್ಲಿ ಮಾರಾಟಕ್ಕೆ ತೆಗೆದಿರುತ್ತಿರೊ ಎಂದರೆ NA ಲ್ಯಾಂಡ್ ವನ್ನು ಮಾರಾಟಕ್ಕಾಗಿ ತೆಗೆದಿರುತ್ತೇವೆ . ಕೃಷಿ ಜಮೀನನ್ನು ಸಾಲ ಬದ್ರತೆಗಾಗಿ ಪಡೆದುಕೊಂಡಿರುತ್ತೇವೆ . ಅದರಲ್ಲಿ ರೆಕಾರ್ಡ ಆಫ್ ರೈಟ್ಸ ಗಳಲ್ಲಿ ಕೆಡಿಸಿಸಿ ಬ್ಯಾಂಕಿಗೆ ಒತ್ತೆ ಯಾಗಿರುತ್ತದೆ ಎಂದು ಬರೆದು ಕೊಂಡಿರುತ್ತದೆಯೋ ಅಥವಾ ಇಲ್ಲವೊ ಎಂದರೆ ಇದೆ . ದಾವಾ ದಲ್ಲಿ ಕಾಣಿಸಿದ 3 ಜಮಿನುಗಳನ್ನು ಒತ್ತೆ ಯಾಗಿ ಇಟ್ಟು ಕೊಂಡು ಕೂಡ ಈ 3 ಜಮಿನುಗಳನ್ನು 1 ನೇ ಪ್ರತಿವಾದಿಯು ಮಾರಾಟ ಮಾಡಿರುತ್ತಾನೆ ಎಂದು ಪಬ್ಲಿಕ್ ನೊಾಟಸನ್ನು ಕೊಟ್ಟಿರುತ್ತಿರಾ ಎಂದರೆ ನಾವು ಬಿನಶೆತ್ಕಿ ಆಸ್ತಿಯನ್ನು ಮಾರಾಟ ಮಾಡಿದ್ದರ ಬಗ್ಗೆ ಪೇಪರ ಜಾಹಿರಾತು ಕೊಟ್ಟದ್ದು ಇರುತ್ತದೆ .

3.ನಿಮ್ಮ ಬ್ಯಾಂಕಿನ ನಿಯಮಾವಳಿ ಪ್ರಕಾರ ಅಥವಾ ಸಹಕಾರಿ ಸಂಘದ ಕಾಯ್ದೆ ಯಡಿಯಲ್ಲಿ ಏನೆ ವ್ಯತ್ಯಾಸಗಳು ಬಂದರೂ ಅದನ್ನು ಅದನ್ನು ಸಹಕಾರಿ ಸಂಘದ ಕಾಯ್ದೆ ಯಡಿಯಲ್ಲಿ ಬಗೆಹರಿಸಿಕೊಳ್ಳಬೇಕು ಎಂದು ಇರುತ್ತದೆ ಎಂದರೆ ಸರಿ . ನಿಮಗೆ ಒತ್ತೆ ಇಟ್ಟು ಕೊಂಡ ಜಮಿನನನ್ನು ಸಾಲಗಾರನು ಮಾರಾಟ ಮಾಡಿದ್ದಲ್ಲಿ ಅದರ ಕ್ರಮವಾಗಿ ನೀವು ಮೆಲ್ಮನವಿ ಸಲ್ಲಿಸುವ ಅಧಿಕಾರ ನಿಮಗೆ ಇರುತ್ತದೆ ಎಂದರೆ ಸರಿ . ಈ ವರೆಗೆ 1 ನೇ ಪ್ರತಿವಾದಿ ಯು ಜಮೀನನ್ನು ಮಾರಾಟ ಮಾಡಿದ ಬಗ್ಗೆ ನಿಮ್ಮ ಅಧಿಕಾರಿಗಳ ಬಳಿಯಲ್ಲಾಗಲಿ ಅಥವಾ ಅಸಿಸ್ಟಂಟ್ ರಜಸ್ಟಾರ್ರ ಬಳಿಯಲ್ಲಾಗಲಿ ,ಸರ್ಟಿಫಿಕೇಟ್ ಪಡೆದುಕೊಂಡದ್ದು ಇರುತ್ತದೆ ಯಾ ಎಂದರೆ ಹೌದು . ಅಂತಹ ಸರ್ಟಿಪಿಕೇಟ್ ನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ದಾಖಲಾತಿಗಳಲ್ಲಿ ಇಲ್ಲ ಎಂದರೆ ಸರಿ . ಸಾಕ್ಷಿ ಅವಶ್ಯ ಇದ್ದಲ್ಲಿ ಅದನ್ನು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ . ಅಸಿಸ್ಟಂಟ್ ರಜಿಸ್ಟಾರ್ ಆಗಲಿ ಜೊಯಿಂಟ್ ರಜಸ್ಟಾರ್ ಆಗಲಿ ಅಥವಾ ಡೆಪ್ಯುಟಿ ರಜಿಸ್ಟರ ಆಗಲಿ ಸದ್ರಿ ಪ್ರಕರಣ ತೆಗೆದುಕೊಂಡು ಟ್ರಿಬ್ಯೂನಲ್ ಗೆ ಹೋಗಿ ಎಂದು ಆದೇಶ ವನ್ನು ನಿಮಗೆ ಕೊಟ್ಟಿರುತ್ತಾರಾ ಎಂದರೆ ಅದೇಶ ಮಾಡಿದ್ದು ಇಲ್ಲ . ನೀವು 1 ನೇ ಪ್ರತಿವಾದಿ ಯನ್ನು ಸದ್ರಿ ದಾವೆ ಖರ್ಚು ನ್ಯಾಯಾಲಯದ ಖರ್ಚು ಹಾಗೂ ವಕಿಲರ ಖರ್ಚನ್ನು ತೆಗೆಸಲು ನ್ಯಾಯಾಲಯಕ್ಕೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ . ಒತ್ತೆ ಇಟ್ಟ ಆಸ್ತಿಗಳನ್ನು ಮಾರಾಟ ಮಾಡಿ ಖರೀದಿದಾರರ ಹೆಸರು ಬಂದರೂ ಸಹ ನಿಮ್ಮ ಸಂಸ್ಥೆ ಯಲ್ಲಿ ಬೋಜಾ

ಎನ್ನುವ ಎಂಟ್ರಿ ಆರ್ ಟಿ ಸಿ ಯಲ್ಲಿ ಕಂಡು ಬರುತ್ತದೆ ಎಂದರೆ ನಮ್ಮಿಂದ ಪಡೆದ ಸಾಲ ಮರು ಪಾವತಿ ಅಗದೆ ಇದ್ದಾಗ ನಾವು NOC ಕೊಡುವುದಿಲ್ಲ .

4. ನನಗೆ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಅಧಿಕಾರ ವನ್ನು ಪ್ರಧಾನ ಕಚೇರಿಯವರು ಕೊಟ್ಟಿರುತ್ತಾರೆ . ಸಾಕ್ಷಿ ಪುನಃ ಕಮಿಟಿಯ ಪರವಾಗಿ ವ್ಯವಸ್ಥಾಪಕ ನಿರ್ದೇಶಕರು ಕೊಟ್ಟಿರುತ್ತಾರೆ . ಆ ಅಧಿಕಾರ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿರುತ್ತೇನೆ . ಪ್ರತಿವಾದಿಗೆ ಸಾಲವನ್ನು ಕೊಡುವಾಗ ಅಥವಾ ಮಂಜೂರಿ ಮಾಡುವಾಗ ನಾನು ಸದ್ರಿ ಸಂಸ್ಥೆ ಯಲ್ಲಿ ವ್ಯವಸ್ಥಾಪಕನಾಗಿರಲಿಲ್ಲ .

5. ರಾಮಾ ಗಣಪತಿ ಭಾಗವತ ರವರು ನಿವೃತ್ತ ಎಮ್ ಡಿ ಆಗಿರುತ್ತಾರೆ . ಅವರು ಈ ದಾವೆ ಮಾಡುವಾಗ ಇದ್ದರು . ವ್ಯವಸ್ಥಾಪಕರ ನಿರ್ದೇಶಕರಾಗಿ ರಾಮಾ ಗಣಪತಿ ಬಾಗವತ ರವರು ಅಧಿಕಾರವನ್ನು ನನಗೆ ದಿನಾಂಕಃ 2022 ಜುಲೈ ದಲ್ಲಿ ಕೊಟ್ಟಿರುತ್ತಾರೆ . ಜಮಿನು ಒತ್ತೆ ಇಟ್ಟದ್ದು ಸಾಲ ಪಡೆದದ್ದು ಎಲ್ಲಾ 2015 ಎಂದರೆ ಸರಿ. ಆಗ ನಾನು ಕೆಡಿಸಿಸಿ ಹಿರೆಗುತ್ತಿ ಶಾಖೆಯಲ್ಲಿ ವ್ಯವಸ್ಥಾಪಕನಾಗಿರಲಿಲ್ಲ ಎಂದರೆ ಸರಿ . ನಿಮಗೆ ಸದ್ರಿ 1 ನೇ ಪ್ರತಿವಾದಿ ಸಾಲ ಪಡೆದ ಬಗ್ಗೆ ಮತ್ತು ಜಮಿನು ಒತ್ತೆ ಇಟ್ಟ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿ ಜಮಿನುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಸಾಲದ ಖಾತೆಗೆ ಜಮಾ ಮಾಡಿರುತ್ತಾನೆ ಎಂದರೆ ಸರಿಯಲ್ಲ . ಸದ್ರಿ ರೆಕಾರ್ಡ ನಲ್ಲಿ ಖರೀದಿದಾರನ ಹೆಸರು ದಾಖಲಾದ ನಂತರ ಎಸಿ ಮತ್ತು ಡಿಸಿ ಹಾಗೂ ತಹಶೀಲ್ದಾರ ರವರ ಬಳಿಯಲ್ಲಿ ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಹೌದು ಮಾಡಿರುತ್ತೇವೆ . ಆ ಎಲ್ಲಾ ಅಧಿಕಾರಿಗಳು ಕೊಪರೇಟಿವ ಸೊಸೈಟಿಯ ವ್ಯಾಪ್ತಿಯಲ್ಲಿ ಅಡಿಯಲ್ಲಿ ಸದ್ರಿ ಆಸ್ತಿಗಳನ್ನು ಮಾರಾಟ ಮಾಡಿದ್ದರ ಬಗ್ಗೆ ಸಹಕಾರಿ ಸಂಘದ ಕೊರಮ ದಲ್ಲಿ ಅದನ್ನು ಬಗೆಹಸಿಕೊಳ್ಳಬೇಕು ಎಂದು ನಿಮಗೆ ನಿರ್ದೇಶನ ಕೊಟ್ಟಿರುತ್ತಾರೆ ಎಂದರೆ ಇಲ್ಲ . ಕೊರ್ಟ್ ಸೊಸೈಟಿಯ ಕಾಯ್ದೆ ಯಡಿಯಲ್ಲಿ ದಾವೆ ಹಾಕಿದರೆ ಕೊರ್ಟ ಫಿ ಕಟ್ಟುವುದು ಬರುವುದಿಲ್ಲ ಎಂದರೆ ಕೊರ್ಟ ಫಿ ಯನ್ನು ಅವರಿಂದ ನಾವು ಪಡೆಯಬೇಕಾಗುತ್ತದೆ . ನಿಮಗೆ ಚಿಪೇಸ್ಟ ಮತ್ತು ಇಜೆಯಸ್ಟ ರೆಮೆಡಿ ಇದ್ದರೂ ಸಹ ಈ ನ್ಯಾಯಾಲಯದ ಮುಂದೆ ಬಂದು ಹಣದ ಖರ್ಚು ವೆಚ್ಚ ಮತ್ತು ಸಮಯ ಹಾಳು ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ .

( ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.